brass, copper and bronze to help the growth and development of this industry in Sravanabelagola and the surrounding villages ?

A.—Sri C. M. POONACHA (Minister for Home Affairs and Industries).—

(*a*) No representations have been received.

(*b*) Yes.

(*c*) No.

ಶ್ರೀ ಎ೯. ಜಿ. ನರಸಿಂಹೇಗೌಡ.—ಮಂತ್ರಿಗಳಿಗೆ ಮನವಿ ಬಂದಿಲ್ಲ ಎಂದು ಉತ್ತರ ಕೊಟ್ಟಿದ್ದೀರಿ. ನಾನೇ ಅನೇಕ ಸಾರಿ ಅರ್ಜಿಗಳನ್ನು ಕೊಟ್ಟಾಗ್ಗೂ ಕೂಡ, ಮನವಿ ಬಂದಿಲ್ಲ ಎಂದು ಹೇಳುವುದಕ್ಕೆ ಕಾರಣವೇನು ?

ಶ್ರೀ ವೀರೇಂದ್ರ ಪಾಟೀಲ್.—ಅರ್ಜಿಕೊಟ್ಟಿರುವುದು ನನಗೆ ಗೊತ್ತಿಲ್ಲ. ಯಾವ ಮನವಿಗಳೂ ನನಗೆ ಬಂದಿಲ್ಲ.

ಶ್ರೀ ಎ೯. ಜಿ. ನರಸಿಂಹೇಗೌಡ.—ಅರ್ಜಿಗಳು ಎಂದರೆ ಬರಿಯ ಮಂತ್ರಿಗಳಿಗೆ ಬಂದ ಅರ್ಜಿಗಳೋ ? ಅಥವಾ ಸಂಬಂಧಪಟ್ಟ ನೌಕರರುಗಳಿಗೆ ಕೊಟ್ಟಿರುವ ಅರ್ಜಿಗಳೂ ಅವುಗಳಲ್ಲಿ ಸೇರುತ್ತವೆಯೋ ?

ಶ್ರೀ ವೀರೇಂದ್ರ ಪಾಟೀಲ್.—ಎಲ್ಲಾ ಅರ್ಜಿಗಳೂ ಸೇರುತ್ತವೆ. ಆದರೆ ಯಾವ ಅರ್ಜಿಗಳೂ ನನಗೆ ಬಂದಿಲ್ಲ.

ಶ್ರೀ ಎ೯. ಜಿ. ನರಸಿಂಹೇಗೌಡ.—ಹಾಸನ ಡಿಸ್ಟ್ರಿಕ್ಟ್ ಇಂಡಸ್ಟ್ರಿಯಲ್ ಸೂಪರ್‌ಇಂಟೆಂಡೆಂಟ್‌ರವರಿಗೆ ಅರ್ಜಿ ಕೊಟ್ಟಿದ್ದೇನೆ. ಇಷ್ಟಿದ್ದರೂ ಯಾವ ಅರ್ಜಿಗಳೂ ಬಂದಿಲ್ಲ ಎಂದು ಹೇಳಿದ್ದೀರಿ. ಕಾರಣವೇನು ?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಕೊಟ್ಟಿರುವ ಅರ್ಜಿ ನನಗೆ ಬಂದಿಲ್ಲ. ನಾನು ಅದನ್ನು ವಿಚಾರಣೆ ಮಾಡುತ್ತೇನೆ.

ಶ್ರೀ ಎ೯. ಜಿ. ನರಸಿಂಹೇಗೌಡ.—ಶ್ರವಣಬೆಳಗೊಳ ಮತ್ತು ಸುತ್ತಮುತ್ತಲಿನ ಜಾಗಗಳಲ್ಲಿ ಎರಡು ಮೂರು ಸಾವಿರ ಸಂಸಾರಗಳು ಗಣಿ ಕೆಲಸದಿಂದ ಜೀವನ ಮಾಡುತ್ತಿರುವುದರಿಂದ, ಸರ್ಕಾರದವರು ಒಂದು ಕಾರ್ಖಾನೆ ತೆರೆಯುವ ಅವಶ್ಯಕತೆ ಇಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್—ಸಾಕಷ್ಟು ಶಕ್ಯತೆ ಇಲ್ಲ. ಸರ್ಕಾರದವರಿಗೆ ಅಲ್ಲಿ ಯಾವ ಫ್ಯಾಕ್ಟರಿಯನ್ನೂ ತೆಗೆಯುವ ಉದ್ದೇಶವಿಲ್ಲ.

ಶ್ರೀ ಎ೯. ಜಿ. ನರಸಿಂಹೇಗೌಡ.—ಲೋಹದ ಉದ್ಯಮದಲ್ಲಿ ತೊಡಗಿರುವ ನೌಕರರ ಮತ್ತು ಕೂಲಿಗಾರರ ಅನುಕೂಲಕ್ಕಾಗಿ ಒಂದು ಕಾರ್ಖಾನೆಯನ್ನು ತೆಗೆಯಿರಿ ಎಂದು ಜನಗಳು ಹೇಳುತ್ತಿರುವುದು ಗೊತ್ತಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಅಲ್ಲ ಫ್ಯಾಕ್ಟರಿಗಳನ್ನು ತೆಗೆಯುವ ವಿಷಯವನ್ನು ಪ್ರೈವೇಟ್ ಸೆಕ್ಟರಿಗೆ ಸರ್ಕಾರದವರು ಬಿಟ್ಟುಬಿಟ್ಟಿರುತ್ತಾರೆ. ಪಬ್ಲಿಕ್ ಸೆಕ್ಟರ್ ಫ್ಯಾಕ್ಟರಿ ತೆಗೆಯುವ ವಿಚಾರವೇ ಇಲ್ಲ.

ಶ್ರೀ ಎ೯. ಜಿ. ನರಸಿಂಹೇಗೌಡ.—ಹೋಗಲಿ, ಮೈಸೂರು ಸರ್ಕಾರದವರು ಶ್ರವಣಬೆಳಗೊಳದ ಕಡೆಯಲ್ಲಿ ಒಂದು ಫ್ಯಾಕ್ಟರಿಯನ್ನು ತೆಗೆಯುವ ಪ್ರಯತ್ನ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ನಾನು ಆಗಲೇ ಉತ್ತರ ಕೊಟ್ಟಿದ್ದೇನೆ, ಸರ್ಕಾರದ ಮುಂದೆ ಅಂತಹ ಯಾವ ಪ್ರಪೋಸಲ್ ಇಲ್ಲ ಎಂದು.

ಶ್ರೀ ಎ೯. ಜಿ. ನರಸಿಂಹೇಗೌಡ.—ಈ ವಿಷಯವನ್ನು ಏಕ್ಸಾಮಿನ್ ಮಾಡುವುದಕ್ಕೆ ಅವಕಾಶ ಕಲ್ಪಿಸಿಕೊಡುತ್ತೀರಾ.

ಶ್ರೀ ವೀರೇಂದ್ರ ಪಾಟೀಲ್.—ಸರ್ಕಾರದ ದೃಷ್ಟಿಯಿಂದ ನಾವು ವಿಚಾರಮಾಡುವ ಯೋಚನೆಇಲ್ಲ. ಆದ್ದರಿಂದ ಎಕ್ಸಾಮಿನ್ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಎ೯. ಜಿ. ನರಸಿಂಹೇಗೌಡ.—ಈ ಫ್ಯಾಕ್ಟರಿಯನ್ನು ಗೃಹಕೈಗಾರಿಕೆಯಾಗಿ ಕನ್‌ವರ್ಟ್‌ಮಾಡಿ ಎಂದು ಮನವಿ ಬಂದಿದೆ, ಹೆಚ್ಚಿನ ವಿಚಾರಣೆ ನಡೆಸುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಎರಡು ಮೂರು ಸಾವಿರ ಜನ ಸೇರಿ, ಒಂದು ಕೋ-ಆಪರೇಟಿವ್ ಸೊಸೈಟಿ ಮಾಡಿಕೊಂಡು, ಒಂದು ಸ್ಕೀಮ್ ಕೊಟ್ಟರೆ, ಸರ್ಕಾರದವರು ವಿಚಾರ ಮಾಡುತ್ತಾರೆ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಮಂತ್ರಿಗಳು ಫ್ಯಾಕ್ಟರಿ ತೆರೆಯುವುದಕ್ಕೆ ಸರ್ಕಾರಕ್ಕೆ ಶಕ್ತಿ ಇಲ್ಲ ಎಂದು ಹೇಳಿದರು.

ಅಧ್ಯಕ್ಷರು.—ಹಾಗೆ ಹೇಳಲಿಲ್ಲ. ಶಕ್ಯತೆ ಇಲ್ಲ ಎಂದು ಹೇಳಿದರು. ಅಂದರೆ ಅವಶ್ಯಕತೆ ಇಲ್ಲ ಎನ್ನುವ ಅರ್ಥದಲ್ಲಿ.

ಶ್ರೀ ಬಿ. ಕೆ. ಪುಟ್ಟರಾಮಯ್ಯ.—ಮಂತ್ರಿಗಳಿಗೆ ಬಿಡಿ, ಸ್ವಾಮಿ, ಅವರೇ ನಮಜಾಯಿಶಿ ಕೊಡಲಿ.

Mr. SPEAKER.—Question time is over.

Governor's Reply to the Motion of Thanks.

Mr. SPEAKER.—I have received a message from His Highness the Governor of Mysore which reads as follows :

" March 4th, 1958.

To

The Members of the Mysore Legislative Assembly.

I have received with great satisfaction the expression of your thanks for the speech with which I opened the Budget Session, 1958, of both Houses of the Legislature.

JAYA CHAMARAJA WADIYAR,
Governor of Mysore."

Adjournment Motions.

Mr. SPEAKER.—I have received notice of two adjournment motions and they will be taken up tomorrow.